IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಅಕ್ಕಮಹಾದೇವಿ ಮತ್ತು ಹೊನ್ನಮ್ಮರ ದೃಷ್ಟಿಯಲ್ಲಿ ಕುಟುಂಬ–ದಾಂಪತ್ಯ

ಡಾ. ಸುನೀತ ಬಿ ವಿ

**ಸಾರಲೇಖ:**

ದಾಂಪತ್ಯದ ಎರಡು ಮನಸ್ಸುಗಳು ಪರಸ್ಪರ ಮಾಸದಂತೆ ಏಕೀಭನವಿಸುಕೆಯ ಅಬೇಧತೆ ಸುಖಮತೆಯ ದಾಂಪತ್ಯ. ಅಕ್ಕನ ರಚನೆಗಳು ಅವಳ ಬದುಕಿನ ಕ್ರಮವಾಗಿದೆ. ಹೊನ್ನಮ್ಮನ ಕೃತಿಯು ಮಹಿಳೆಗಾಗಿಯೆ ರಚನೆಯಾಗಿರುವಂತಹದ್ದು. ಹೆಣ್ಣಿನ ಜೀವನ ಸಾರ್ಥಕವಾಗಬೇಕಾದರೆ ಮದುವೆ ಹಾಗೂ ದಾಂಪತ್ಯದಲ್ಲಿ ಎನ್ನುವ ಭಾವನೆ ಹೊನ್ನಮ್ಮನಲ್ಲಿದೆ. ಹೆಣ್ಣಿನ ಬದುಕು ದಾಂಪತ್ಯದಲ್ಲಿಯೇ ಪರಿಪೂರ್ಣಗೊಳಿಸಿದ್ದಾಳೆ.ಹೆಣ್ಣು ಮತ್ತು ಅವಳ ಸಂಸಾರಿಕ ಬದುಕು ಹೇಗಿರಬೇಕು ಎಂಬುದನ್ನು ಹಲವು ಪುರಾಣ ಸಂಗತಿಗಳನ್ನು, ಪ್ರಸಿದ್ಧ ಸ್ತ್ರೀ ಪಾತ್ರಗಳನ್ನು ಉಲ್ಲೇಖಿಸಿ ಉಪದೇಶದ ಉದ್ದೇಶದಿಂದಲೇ ರೂಪಗೊಂಡಿದೆ. ಅಕ್ಕನಿಗೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸತಿಧರ್ಮ ಮುಖ್ಯವಾಗಿ ವ್ಯಕ್ತಿ ಸ್ವಾತಂತ್ರ ಪ್ರಿಯವಾಯಿತು. ಅಕ್ಕನ ದಿಟ್ಟತನ ನಿಲುವು ಸ್ವಾಭಾತಃ ಕುಟುಂಬಕ್ಕೆ ಅಂಟಿದ ಸಾಧ್ವಿಯಾಗಿ ಬದುಕಲು ಸಾಧ್ಯವಿಲ್ಲ. ಇಬ್ಬರದು ಪತಿಭಕ್ತಿ ಭಾವವೇ ಎರಡರಲ್ಲಿ ಜೀವನ ಪ್ರೀತಿಯಿದೆ. ಆದರೂ ಹೊನ್ನಮ್ಮನ ಲೌಕಿಕ ಪತಿಪ್ರೇಮ ಭಕ್ತಿ , ಹೊನ್ನಮ್ಮ ಕಾಯಸಹಿತ ಪತಿದೇವರಲ್ಲಿಟ್ಟ ಅನುರಾಗವನ್ನು ಅಂತರಂಗದಲ್ಲಿ ತುಂಬಿಕೊಂಡಿದ್ದಾಳೆ. ಅಕ್ಕನ ಅಲೌಕಿಕ ಪತಿಪ್ರೇಮ ಭಕ್ತಿ, ಕಾಯರಹಿತ ಚೆನ್ನಮಲ್ಲಿಕಾರ್ಜುನನಲ್ಲಿಟ್ಟು ಅನುರಾಗವನ್ನು ಬಹಿರಂಗವಾಗಿ ವ್ಯಕ್ತಪಡಿಸಿದ್ದಾಳೆ. ಪ್ರೀತಿಯ ಮೇಲ್ಮೆಯನ್ನು ಪತಿಭಕ್ತಿಯ ಈ ಎರಡೂ ಮಾರ್ಗಗಳು ಸಾರುತ್ತವೆ. ಇಬ್ಬರ ಪ್ರೇಮವೂ ಮನಸ್ಸಿಗೆ ಮುದನೀಡುವ ಜೀವನ ಸಾರ್ಥಕತೆ ಪಡೆಯುವ ಉದ್ದೇಶವಿದೆ.

**ಪ್ರಮುಖ ಪದಗಳು:**

ಸ್ವಾಭಿಮಾನ, ಸ್ತ್ರೀವಾದ, ಅಧೀನತೆ, ವಿಮೋಚನೆ, ದಾಂಪತ್ಯ, ಸಂಪ್ರದಾಯ, ಕುಟುಂಬ

**ಪೀಠಿಕೆ:**

ಚಾರಿತ್ರಿಕ ಪರಂಪರೆಯಲ್ಲಿ ಮಹಿಳೆಯ ಜಡಮೌನದಲ್ಲಿ ಅವಳ ಹೆಜ್ಜೆಯ ಗುರುತುಗಳು ಸಾಹಿತ್ಯದಲ್ಲೂ ಇದ್ದು ಈ ಹುಡುಕಾಟ ಒಂದು ಸಂಕೀರ್ಣತೆಯ ವೃತ್ತವನ್ನು ಸುತ್ತುವ ಕೆಲಸವೆನಿಸುತ್ತದೆ. ಮಹಿಳಾಪರ ಚಿಂತನೆಗಳು ಬಲಗೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಮಹಿಳಾವಾದ, ಸ್ತ್ರೀವಾದ, ಮಹಿಳಾ ವಿಮೋಚನೆಗಳು ಹಾಗೂ ವಿವಿಧ ಮಹಿಳಾ ಜಾಗೃತಿಗಳು ಸೃಷ್ಟಿಸಿಕೊಂಡಿರುವ ಹಲವು ಚಿಂತನೆಗಳು ವಿಭಿನ್ನ ವಿಚಾರಗಳೊಂದಿಗೆ ತನ್ನ ಅಸ್ತಿತ್ವವನ್ನು ಸಮಾನತೆ ಹಾಗೂ ಸ್ವತಂತ್ರ್ಯ ನೆಲೆಯಿಂದ ರೂಪಿಸಿಕೊಳ್ಳುವ ತವಕದಲ್ಲಿ ಕಳೆದ ಮೂರ್‍ನಾಕು ದಶಕಗಳಿಂದ ಅಧಿಕೃತಗೊಳಿಸಿಕೊಂಡು ಬಹುಶಿಸ್ತೀಯ ಮಹಿಳಾ ಅಧ್ಯಯನಗಳು ಹಾಗೂ ಮಹಿಳಾ ಸಾಹಿತ್ಯದಲ್ಲಿ ಅನ್ವಯಗೊಂಡು ಮಹಿಳಾಪರ ವಿಚಾರಗಳಾಗಿ ತಾತ್ವಿಕ ನೆಲೆಗಟ್ಟಿನಲ್ಲಿ ಸಾಹಿತ್ಯ, ಚಳುವಳಿ, ಹೋರಾಟಗಳಲ್ಲಿ ಮಹಿಳಾಪರ ಚಿಂತನೆಗಳು ಗಟ್ಟಿ ನೆಲೆ ಕಂಡುಕೊಳ್ಳುತ್ತಿವೆ. ಸಾಹಿತ್ಯದಲ್ಲಿ ಅತಿಮುಖ್ಯವಾದ ಸಾಂಸ್ಕೃತಿಕ ವಿಚಾರದಯಲ್ಲಿ ಮಹಿಳಾವಾದ ಬದಲಾದ ಸಾಂಸ್ಕೃತಿಕ ನೆಲೆಯಾಗಿ ರೂಪಗೊಳಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆ ತನ್ನನ್ನು ಕುರಿತಾದ ಸಾಹಿತ್ಯ ಹಾಗೂ ಚರಿತ್ರೆಯಲ್ಲಿನ ಪಿಸುಮಾತು ಹೆಚ್ಚು ಪ್ರಮುಖವೆನಿಸುತ್ತದೆ. ಜನಪದ ಹಾಗೂ ಶಿಷ್ಟ ಪರಂಪರೆಗಳಲ್ಲಿನ ಮಹಿಳೆಯ ಕುರಿತಾದ ಹೆಣ್ಣಿನ ಧ್ವನಿಯನ್ನು ಕಳೆದು ಹೋದ ಹೆಣ್ಣಿನ ಅವಸ್ಥೆಯನ್ನು, ಪುರುಷ ಚರಿತ್ರೆಯಿಂದ ಹೊರತೆಗೆದು ಮಹಿಳಾ ನೆಲೆಯಲ್ಲಿ ಅಧ್ಯಯನ ಮಾಡುವ ಕೆಲಸ ನಡೆಯುತ್ತಿದೆ.

ಮಹಿಳೆಯ ಜೀವನ ಹೋರಾಟ ಸಂಘರ್ಷಗಳಿಗೆ ಮೀಸಲಾದದ್ದು ಅಲ್ಲ. ಅವಳ ಇತಿಹಾಸ ಅಧೀನತೆಯಲ್ಲಿ ಕೊರಗಿದೆ. ತನ್ನ ಅಧೀನತೆಯಿಂದ ಹೊರಬಂದು ತನ್ನ ಅಸ್ತಿತ್ವವನ್ನು ನಿರೂಪಿಸಿಕೊಳ್ಳುವಲ್ಲಿ ಸ್ವತಂತ್ರ ಸಮಾನತೆಯ ಹಾದಿಯಲ್ಲಿ ನಡೆಯಬೇಕಾಗಿದೆ. ತನ್ನ ಸ್ವತಂತ್ರ ಸಮಾನತೆ ಹಾಗೂ ಸ್ವಾಭಿಮಾನಕ್ಕೆ ಅಡ್ಡಿಯಾದಾಗ ಪ್ರತಿಯೊಬ್ಬ ಹೆಣ್ಣು ಅವುಗಳನ್ನು ಪಡೆಯಲು ಅವಳದೇ ಆದ ಸ್ಥಿತಿಯಲ್ಲಿ ಹೋರಾಟ ಮಾಡುವ ವಾತಾವರಣ ಸೃಷ್ಟಿಯಾಗಬೇಕು. 'ಹೆಂಗೂಸೆಂಬ' ಲೌಕಿಕ ಸಂಬಂಧವನ್ನು, ಹಸಿವು–ತೃಷೆಗಳನ್ನು ಒಳಗೊಂಡಂತೆ ಮನುಷ್ಯ–ಸಮಾಜದ ಸಂಬಂಧ ಹಾಗೂ ಲೋಕ ಸಂಪ್ರದಾಯಗಳೆಲ್ಲವನ್ನೂ ನಿರಾಕರಿಸಿ ಇವುಗಳಿಂದ ಕಳಚಿಕೊಂಡು ಲೋಕ ವಿಮೋಚನೆಯ ಮಾರ್ಗದಲ್ಲಿ ನಡೆದವಳು ಅಕ್ಕಮಹಾದೇವಿ. ಬದುಕಿನ ಆಸೆಗಳಿಗೆ ತಳವಿಲ್ಲ ಅನಿಸಿದಾಗ ಮನಸ್ಸು ಹೊರಳುವುದು ಆಸೆಗಳಿಲ್ಲದ ವಿಮೋಚನೆಯಡೆಗೆ. ಅಕ್ಕ ಜಗತ್ತಿನ ಅಸಮಾನತೆ, ಶೋಷಣೆಗಳನ್ನು ಮೆಟ್ಟಿ ಭಯ ಮರೆತು, ದಬ್ಬಾಳಿಕೆಯ ವಿರುದ್ಧ ದನಿ ಎತ್ತಿ, ಚೆನ್ನಮಲ್ಲಿಕಾರ್ಜುನನಲ್ಲಿ ವಿಶ್ವಾಸವಿಟ್ಟಳು. ನನ್ನ ಮೇಲೆ ತಾನಿರಿಸಿಕೊಂಡ ವಿಶ್ವಾಸ ಬಹುದೊಡ್ಡದು.

ಈ ಸಂದರ್ಭದಲ್ಲಿ ಸಂಪ್ರದಾಯವಾದಿಯಾದರೂ ಹೊನ್ನಮ್ಮನಲ್ಲಿಯೂ ಸಮಾನತೆಯ ಪ್ರಜ್ಞೆ ಸ್ವಲ್ಪಮಟ್ಟಿಗಾದರೂ ಇದೆ. ಇನ್ನು ಅಕ್ಕನ ಬದುಕೇ ಒಂದು ಹೋರಾಟದ ಕಥನವಾಗಿದೆ. ಅಕ್ಕನ ವಚನಗಳಲ್ಲಿ ಮಾನವ ಸಹಜ ನಿಷ್ಠೆ, ಸತ್ಯಗಳು ಮಿಗಿಲಾಗಿ ದೈನ್ಯ, ಕೃತಜ್ಞತೆ ಈ ಎಲ್ಲಾ ಭಾವಗಳು ವ್ಯಕ್ತವಾಗಿವೆ. ಒಟ್ಟಾರೆ ಅಕ್ಕನ ವಚನಗಳು ಶಿವ ಪ್ರೇಮದಿಂದ ತುಂಬಿಕೊಂಡು ಸತ್ವಶಾಲಿಯೂ ಮಧುರವೂ ಆಗಿವೆ. ಹೊನ್ನಮ್ಮನು ಅಕ್ಕನಂತೆ ನೈಜ, ಸಮರ್ಥಕವಿ. ಹೊನ್ನಮ್ಮ ಅಂದಿನ ಸಂಪ್ರದಾಯಿಕ ಕಾವ್ಯಮಾರ್ಗದಿಂದ ದೂರಸರಿದು ತನ್ನ ಕಾವ್ಯ ರಚಿಸಿದ್ದಾಳೆ.

ಹೆಣ್ಣಿನ ಜೀವನ ಸಾರ್ಥಕವಾಗಬೇಕಾದರೆ ಮದುವೆ ಹಾಗೂ ದಾಂಪತ್ಯದಲ್ಲಿ ಎನ್ನುವ ಭಾವನೆ ಹೊನ್ನಮ್ಮನಲ್ಲಿದೆ. ಹೆಣ್ಣಿನ ಬದುಕು ದಾಂಪತ್ಯದಲ್ಲಿಯೇ ಪರಿಪೂರ್ಣಗೊಳಿಸಿದ್ದಾಳೆ. ಸ್ವತಂತ್ರ ಹಾಗೂ ಸಮಾನತೆಗಾಗಿ ಹೋರಾಟ ನಡೆಸುತ್ತಿರುವ ಇಂದಿನ ಹೆಣ್ಣಿನ ದೃಷ್ಟಿಯಲ್ಲಿ ಹೊನ್ನಮ್ಮನ ಈ ನಿಲುವಿನಲ್ಲಿ ವಿರೋಧವಿದೆ. ಹೀಗೆ, ಕೃತಿಯಲ್ಲಿನ ಕೆಲವು ಅಭಿಪ್ರಾಯಗಳಿಗೆ ವಿರೋಧಾತ್ಮಕವಾಗಿ ಪ್ರತಿಕ್ರಿಯಿಸುತ್ತಾ ಹೋದರೆ ಕೆಲವೊಂದು ವಿಚಾರಗಳು ಹೆಣ್ಣಿನ ನೈಜ ಸಮಸ್ಯೆಗಳತ್ತ ದೃಷ್ಟಿ ಸುತ್ತುತ್ತದೆ. ಸೂಚ್ಯವಾಗಿ ವ್ಯಕ್ತವಾದ ವಿಚಾರಗಳಿಗೆ ಹೊನ್ನಮ್ಮನ ಬದುಕು ಹಾಗೂ ಅವಳಿದ್ದ ಸಮಾಜ ವ್ಯವಸ್ಥೆಯ ಆದರ್ಶದ ನೈತಿಕತೆಯ ಪರಿಪಾಲನೆಯೇ ಆಗಿದೆ. ಕೃತಿಯಲ್ಲಿನ ನಿರೂಪಣೆಗಳಲ್ಲಿ ಅಂದಿನ ಹೆಣ್ಣಿನ ಜೀವಂತ ಚಿತ್ರಣವಾಗಿ, ಅಂದಿನ ಸಮಾಜದ ಹೆಣ್ಣಿನ ಸ್ಥಿತಿಗತಿಗಳ ಪ್ರತಿರೂಪದಂತಿವೆ. ಪತಿಯೇ ಪರದೈವ ಎಂಬ ಮೌಲ್ಯಪಾಲನೆ ಅಂದಿನ ಸಂಪ್ರದಾಯ ಸಮಾಜದ ನಿರೀಕ್ಷೆಯಾಗಿತ್ತು.

ಸಂಪ್ರದಾಯ ಸಮಾಜದ ನಿರೀಕ್ಷೆಗಳನ್ನು ಗಾಳಿಗೆ ತೂರಿದ ವೈಚಾರಿಕ ಪ್ರಜ್ಞೆಯುಳ್ಳ ಮಹಾದೇವಿಯಕ್ಕ ಹಾಗೂ ಅತ್ಯಂತ ಸಂಪ್ರದಾಯ ನಿಷ್ಠಳಾದ ಹೊನ್ನಮ್ಮ ಇವರಿಬ್ಬರನ್ನು ಹಲವು ಕಾರಣಗಳಿಗೆ ತುಲನೆ ಮಾಡುವುದುಂಟು. ಸಂಸಾರವನ್ನು ತೊರೆದ ಅಕ್ಕ ವೈಯಕ್ತಿಕ ಸಾಧನೆಯ ಕುರುಹಾಗಿ ಆಧ್ಯಾತ್ಮದ ತುತ್ತ ತುದಿಯಲ್ಲಿ ಶೋಭಿದ ಸ್ತ್ರೀಶಕ್ತಿ. ಅರಮನೆಯ ವೈಭವದ ಬದುಕಿನ ನಡುವೆಯೂ ಸಮಸ್ತ ಸ್ತ್ರೀಕುಲವನ್ನು ಕುರಿತು ಚಿಂತಿಸುವ ಹೊನ್ನಮ್ಮ ನಮಗೆ ಹತ್ತಿರವಾಗಿದ್ದಾಳೆ. ಅಕ್ಕ ತನ್ನ ಹೋರಾಟದ ಬದುಕಲ್ಲಿ ತೋರಿದ ದಿಟ್ಟತನ, ಏರಿದ ಆಧ್ಯಾತ್ಮಿಕ ಎತ್ತರ, ಹಾಗೂ ಅನುಭಾವಕ್ಕೆ ಗೌರವ, ಮೆಚ್ಚಿಗೆ ಸೂಚಿಸಬಹುದು. ಆದರೆ, ಹೊನ್ನಮ್ಮನೊಂದಿಗೆ ಜಗಳವಾಡುತ್ತ ಅವಳ ಅಭಿಪ್ರಾಯವನ್ನು ವಿರೋಧಿಸುತ್ತ ಸಮಾನಾಂತರವಾದ ಸ್ತ್ರೀಪರವಾದ ಕೈಪಿಡಿಯನ್ನು ರಚಿಸಬಹುದು.

ಅಕ್ಕನಿಗೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸತಿಧರ್ಮ ಮುಖ್ಯವಾಗಿ ವ್ಯಕ್ತಿ ಸ್ವಾತಂತ್ರ ಪ್ರಿಯವಾಯಿತು. ಅಕ್ಕನ ದಿಟ್ಟತನ ನಿಲುವು ಸ್ವಾಭಾತಃ ಕುಟುಂಬಕ್ಕೆ ಅಂಟಿದ ಸಾಧ್ವಿಯಾಗಿ ಬದುಕಲು ಸಾಧ್ಯವಿಲ್ಲ. ಸಾಮಾಜಿಕ ಮೌಲ್ಯಗಳಲ್ಲಿ ನಂಬಿಕೆಯಟ್ಟ ಹೊನ್ನಮ್ಮ, ಕೈಹಿಡಿದ ಪತಿ ಕುರುಡನಿರಲಿ, ಕುಂಟನಿರಲಿ, ದುಷ್ಟನಿರಲಿ ತನ್ನ ಬದುಕಿಗೆ ಗಂಡನೇ ಎಲ್ಲಾ. ಅಕ್ಕನಂತೆ ಮದುವೆಯಾಗುವ ಗಂಡನಿಂದ ವಚನ ಪಡೆಯುವುದು, ವಚನಭ್ರಷ್ಟನಾಡೊಡನೆ ಮದುವೆ, ಗಂಡನೊಂದಿಗಿನ ಸಂಬಂಧಗಳನ್ನು ಮುರಿದು ಹೊರಬರುವುದು ಹೊನ್ನಮ್ಮನಂತ ಸಾಧ್ವಿಗೆ ಸಾಧ್ಯವಾಗದು. ಅಕ್ಕಮಹಾದೇವಿ ಇಪ್ಪತ್ತರ ಎಳೆಹರಿಯದಲ್ಲಯೇ ಉನ್ನವಾದ ಆಧ್ಯಾತ್ಮಿಕ ತತ್ವಗಳನ್ನು ಪ್ರತಿಪಾದಿಸಿದ್ದಾಳೆ. ಈಕೆ ಎಲ್ಲರಂತೆ ಪತಿ, ಮನೆ, ಮಕ್ಕಳು ಇದಕ್ಕಾಗಿ ಹುಟ್ಟಿದವಳಲ್ಲ. ಅವಳ ಬಾಳು ಸಮಾಜವನ್ನು ಮುನ್ನಡೆಸಲಿಕ್ಕಾಗಿ ಅಂದಿನವರೆಗೆ ತುಳಿಯಲ್ಪಟ್ಟ ಮಹಿಳಾ ಕುಲದ ಸ್ವಾತಂತ್ರಕ್ಕಾಗಿ ಹೋರಾಟ ನಡೆಸಲು ಮೀಸಲಾಗಿರುವಂತೆ ಅನಿಸುತ್ತದೆ. ಲೋಕಪತಿಯಿಂದ ದೂರವಾಗಿ ಶ್ರೀಶೈಲ ಮಲ್ಲಿಕಾರ್ಜುನನನ್ನು ಆರಿಸಿಕೊಳ್ಳುವಲ್ಲಿಯೇ ಅವಳಗೆ ಪರಮಾನಂದವಿದೆ, ಅವಳ ಬಂಡಾಯವೂ ಇದೆ. ಜೀವ ನೊಂದಾಗ ಬೆಂದಾಗ ಆ ನೋವು ಸಾಹಿತ್ಯವಾದಾಗ ಅದು ಅಮರ ಕೃತಿಯಾಗುತ್ತದೆ.

ಅಕ್ಕನ ವಚನಗಳು ವಿಶ್ವ ಸಾಹಿತ್ಯದ ಶ್ರೇಷ್ಟ ಕವಿತೆಗಳ ಸಾಲಿನಲ್ಲಿ ನಿಲ್ಲುವಂಥವು. ಆದರೆ ಹೊನ್ನಮ್ಮನ ಮಾರ್ಗ ತುಂಬಾ ಸರಳ. ಅವಳ ದೃಷ್ಟಿಯಲ್ಲಿ ಶ್ರೀಪತಿ ಭಕ್ತಿಗಿಂತ ಪತಿಭಕ್ತಿ ಮಿಗಿಲಾದದ್ದು. ಇಬ್ಬರದು ಪತಿಭಕ್ತಿ ಭಾವವೇ ಎರಡರಲ್ಲಿ ಜೀವನ ಪ್ರೀತಿಯಿದೆ. ಆದರೂ ಹೊನ್ನಮ್ಮನ ಲೌಕಿಕ ಪತಿಪ್ರೇಮ ಭಕ್ತಿ , ಹೊನ್ನಮ್ಮ ಕಾಯಸಹಿತ ಪತಿದೇವರಲ್ಲಿಟ್ಟ ಅನುರಾಗವನ್ನು ಅಂತರಂಗದಲ್ಲಿ ತುಂಬಿಕೊಂಡಿದ್ದಾಳೆ. ಅಕ್ಕನ ಅಲೌಕಿಕ ಪತಿಪ್ರೇಮ ಭಕ್ತಿ, ಕಾಯರಹಿತ ಚೆನ್ನಮಲ್ಲಿಕಾರ್ಜುನನಲ್ಲಿಟ್ಟು ಅನುರಾಗವನ್ನು ಬಹಿರಂಗವಾಗಿ ವ್ಯಕ್ತಪಡಿಸಿದ್ದಾಳೆ. ಪ್ರೀತಿಯ ಮೇಲ್ಮೆಯನ್ನು ಪತಿಭಕ್ತಿಯ ಈ ಎರಡೂ ಮಾರ್ಗಗಳು ಸಾರುತ್ತವೆ. ಇಬ್ಬರ ಪ್ರೇಮವೂ ಮನಸ್ಸಿಗೆ ಮುದನೀಡುವ ಜೀವನ ಸಾರ್ಥಕತೆ ಪಡೆಯುವ ಉದ್ದೇಶವಿದೆ.

ಅಕ್ಕ ಈ ದೇಹವನ್ನು ಕುರಿತು ಹೇಳುವಾಗ **'ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ, ಎಲುಬಿನ ತಡಿಕೆ,'** ಇದು ಅಕ್ಕನ ವೈರಾಗ್ಯಕ್ಕೆ ಹಿಡಿದ ಕನ್ನಡಿ. ಅಕ್ಕನ ಈ ಭಕ್ತಿ ಸಾಮಾನ್ಯ ಮಹಿಳೆಯರ ಊಹೆಗೂ ನಿಲುಕದ ವಿರಾಗಿನೆಲೆಯ ಆಧ್ಯಾತ್ಮಿಕ ಭಕ್ತಿ. ಹೊನ್ನಮ್ಮನದು ಸಾಮಾನ್ಯರಿಗೂ ನಿಲುಕುವ ಸಹಜ ಭಕ್ತಿ. **'ಬರುವುದೇನುಂಟೊಮ್ಮೆ ಬರುವ ಕಾಲಕೆ ಬಹುದು'** ಎಂಬ ಮಾತಿನಲ್ಲಿ ವಿಶ್ವಾಸವಿದೆ. **'ಇನಿಯನ ಮನಕೆ ಸಂಪ್ರೀತಿ ತೋರಿಸುವ ಪೆಂಡಿರಿಗೆ ಸಂತಾನ ಸೌಭಾಗ್ಯ ಸಂಪತ್ತುಗಳನು ಶ್ರೀಕಾಂತನು ಕೈಸೇರಿಸುವನು'** ಎಂಬುದು ಹೊನ್ನಮ್ಮನ ನಿಲುವು. ಮತ–ವಿಚಾರಗಳಲ್ಲಿ ಪ್ರಬಲವಾದ ನಂಬಿಕೆಯಿಟ್ಟಿದ್ದರೂ ತನ್ನ ಆಲೋಚನೆಗಳನ್ನು ಹಲವು ಇಕ್ಕಟ್ಟು ಬಿಕ್ಕುಗಳಲ್ಲಿ ಹೇಳಿದ್ದರೂ ಧೈರ್ಯವಾಗಿ ಕೆಲವೊಂದು ವಿಚಾರಗಳನ್ನು ಹೇಳುವಲ್ಲಿ ಗಟ್ಟಿತನ ಮೆರೆದಿದ್ದಾಳೆ. ಹೆಣ್ಣಿನ ಯೋಗಕ್ಷೇಮವನ್ನು ಕುರಿತು ಚಿಂತಿಸುವ ಆಕೆಯ ವ್ಯಕ್ತಿತ್ವವನ್ನು ಹದಿಬದೆಯ ಧರ್ಮ ಕೃತಿಯಲ್ಲಿ ವ್ಯಕ್ತಪಡಿಸಿದ್ದಾಳೆ. ಆದರೆ ಅಕ್ಕಮಹಾದೇವಿಯಂತೆ ಆಕೆಗೆ ಜನಸಾಮಾನ್ಯರ ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ.

ಅಕ್ಕಮಹಾದೇವಿ ತಾನು ಬರೆಯಬೇಕೆಂದು ಬರೆದವಳಲ್ಲ. ಇನ್ನೊಬ್ಬರ ಉಪಯೋಗಕ್ಕೊ, ನಿರ್ದೇಶನ ಮಾಡುವ ಉದ್ದೇಶ ಇಟ್ಟುಕೊಂಡವಳಲ್ಲ. ಈ ವಿಚಾರ ಅಪ್ರಸ್ತುತವಾದರೂ ತೌಲನಿಕ ವಿಶ್ಲೇಷಣೆಯ ದೃಷ್ಟಿಯಲ್ಲಿ ಈ ವಿಚಾರ ಬಹುಮುಖ್ಯವಾಗುತ್ತದೆ. ಕಾರಣ, ಅಕ್ಕನ ರಚನೆಗಳು ಅವಳ ಬದುಕಿನ ಕ್ರಮವಾಗಿದೆ. ಆದರೆ ಹೊನ್ನಮ್ಮನ ಕೃತಿಯು ಮಹಿಳೆಗಾಗಿಯೆ ರಚನೆಯಾಗಿರುವಂತಹದ್ದು. ಪ್ರಮುಖವಾಗಿ ಹೆಣ್ಣು ಮತ್ತು ಅವಳ ಸಂಸಾರಿಕ ಬದುಕು ಹೇಗಿರಬೇಕು ಎಂಬುದನ್ನು ಹಲವು ಪುರಾಣ ಸಂಗತಿಗಳನ್ನು, ಪ್ರಸಿದ್ಧ ಸ್ತ್ರೀ ಪಾತ್ರಗಳನ್ನು ಉಲ್ಲೇಖಿಸಿ ಉಪದೇಶದ ಉದ್ದೇಶದಿಂದಲೇ ರೂಪಗೊಂಡಿದೆ. ಆದ್ದರಿಂದ ಅಕ್ಕನ ಬದುಕಿನ ವಿಧಾನವನ್ನು ಮತ್ತು ಹೊನ್ನಮ್ಮನ ಕೃತಿಯಲ್ಲಿನ ಉಪದೇಶಗಳ ನಡುವಿನ ವಿಶ್ಲೇಷಣೆಯೇ ಆಗಿದೆ. ಇದನ್ನು ಸ್ಪಷ್ಟಪಡಿಸಿಕೊಂಡಾಗ ತೌಲನಿಕ ವಿಶ್ಲೇಷಣೆಗೆ ಸುಲಭದ ದಾರಿಯಾಗುತ್ತದೆ. ಪ್ರತಿಯೊಂದು ವ್ಯಕ್ತಿತ್ವವು ಚರಿತ್ರೆಯ ನೆರಳಲ್ಲೆ ರೂಪಗೊಳ್ಳುವ ಕಾರಣ ಚರಿತ್ರೆಯನ್ನು ದಾಟಿ ವಿಚಾರ ಮಂಡನೆ ಅಪೂರ್ಣವಾಗುತ್ತದೆ. ಆದ್ದರಿಂದ ಕಾಲ, ಪರಿಸರ, ಸ್ಥಾನ ಮಾನಗಳು, ಸಮಾಜ, ಧರ್ಮ, ನಿಂತ ನಿಲುವು, ಪ್ರೇರಣೆ ಮುಂತಾದ ವಿಚಾರಗಳು ವ್ಯಕ್ತಿಯ ವ್ಯಕ್ತಿತ್ವವನ್ನು ಬದುಕಿನ ರೀತಿ ನೀತಿಗಳನ್ನು ರೂಪಿಸುತ್ತವೆ.

ಕುಟುಂಬದ ಬಗೆಗಿನ ಹಾಗೂ ದಾಂಪತ್ಯ ವಿಚಾರಳಗಲ್ಲಿನ ಹೊನ್ನಮ್ಮ ಮತ್ತು ಅಕ್ಕನ ನಿಲುವುಗಳು ಪರಸ್ಪರ ವಿರುದ್ಧವಾದವುಗಳು. ಅಕ್ಕನಲ್ಲಿ ಸತಿಪತಿಭಾವವಿದ್ದಂತೆ ಹೊನ್ನಮ್ಮನ ವಿಚಾರಗಳಲ್ಲಿ ಸತಿಪತಿಗಳ ಬಂಧನವಿದೆ. ಈ ಇಬ್ಬರ ಭಾವ–ಬಂಧನದಲ್ಲಿ ಅಧೀನತೆಯಿದೆ. ಅಕ್ಕ ಅಂತರಂಗಿಕ ನೆಲೆಯಲ್ಲಿ ಅಧೀನಳಾದರೆ, ಹೊನ್ನಮ್ಮ ಭೌತಿಕ ನೆಲೆಯಲ್ಲಿ ಅಧೀನಳಾಗಿದ್ದಾಳೆ. ಹಾಗಾಗಿ, ಅಕ್ಕಮಹಾದೇವಿ ದೇವರೇ ಪತಿಯೆಂದಳು, ಹೊನ್ನಮ್ಮ ಪತಿಯೇ ದೇವರೆಂದು ಸೇರಿದಳು. ಅಕ್ಕ ಪತಿಯೊಂದಿಗೆ ಆಧ್ಯಾತ್ಮಿಕ ಭಕ್ತಿವೊಂದಿದ್ದರೆ ಸಾಕೆಂದಳು. ಹೊನ್ನಮ್ಮ ಪತಿಭಕ್ತಿಯನ್ನು ಪಾಲಿಸಿದರೇ ಸಾಕೆಂದಿದ್ದಾಳೆ.

ಅಕ್ಕನ ನಿಲುವುಗಳು ಪ್ರಸ್ತುತ ಸಾಂದರ್ಭಿಕ ಸ್ತ್ರೀ ಒಲುವುಗಳಿಗೆ ತಾತ್ವಿಕವಾಗಿ ಒಗ್ಗಿಕೊಂಡರೆ, ಹೊನ್ನಮ್ಮನಲ್ಲಿ ಸ್ತ್ರೀಪರ ಕಾಳಜಿಯಿದ್ದರೂ ಆಧುನಿಕ ಸ್ತ್ರೀವಾದದ ತಾತ್ವಿಕ ವಿಚಾರಗಳಿಗೆ ವಿರೋಧವಾಗಿದೆ. ಪುರುಷ ಪ್ರಧಾನ ನಿಲುವುಗಳಿಗೆ ಆಕೆಯಲ್ಲಿನ ಒಪ್ಪಿಗೆಯೇ ಈ ವಿರೋಧಕ್ಕೆ ಮೊದಲ ಕಾರಣ. ಪುರುಷ ಪ್ರಧಾನ ವೈದಿಕ ಸಂಪ್ರದಾಯಗಳ ಮಧ್ಯೆ ತನ್ನ ಆಸ್ಮಿತೆ ಉಳಿಸಿಕೊಂಡ ಅಕ್ಕ ಸ್ತ್ರೀವಾದದ ನೆಲೆಯ ವಿವೇಚನೆಯಲ್ಲಿ ಸ್ತ್ರೀಯಾತ್ಮಕ ಮಾದರಿಯಲ್ಲಿ ಕಾಣುತ್ತಾಳೆ. ಸಾಂಸ್ಕೃತಿವಾಗಿ ಸ್ತ್ರೀತ್ವ ತೋರಿದ ಹೊನ್ನಮ್ಮ ಸಾಂಸ್ಕೃತಿಕ ಸ್ತ್ರೀವಾದಕ್ಕೂ, ಸಂಪ್ರದಾಯಿಕ ನಿಲುವುಗಳಿಂದ ಸ್ತ್ರೀತ್ವ ಮಾದರಿಯಲ್ಲೂ ಆಕೆಯ ವಿಚಾರಗಳನ್ನು ವಿಶ್ಲೇಷಿಸಲಾಗಿದೆ. ಇಬ್ಬರಲ್ಲೂ ಲಿಂಗಬೇಧ, ಲಿಂಗತಾರತಮ್ಯಗಳಿಗೆ ವಿರೋಧವಿದೆ. ಅಕ್ಕನಲ್ಲಿ ಸಮಾಜವನ್ನು ಎದುರಿಸುವ ಧೈರ್ಯವಿದ್ದರೆ ಹೊನ್ನಮ್ಮನಲ್ಲಿ ಕುಟುಂಬದ ಸಹಬಾಳ್ವೆಯೊಂದಿಗೆ ಸಮಾಜದೊಳಗೆ ಉಳಿಯುವ ನಿರ್ಧಾರವಿದೆ. ಅಕ್ಕ ಸಮಾಜಕೇಂದ್ರಿತ ನಿಲುವುಗಳು ವಿಮೋಚನೆಯ ಮಾದರಿಯಾಗಿ ಹೊನ್ನಮ್ಮನ ಕುಟುಂಬ ಕೇಂದ್ರಿತ ನಿಲುವುಗಳು ಸಂಪ್ರದಾಯದ ಮಾದರಿಯವಾಗಿವೆ. ಈ ವಿಚಾರಗಳನ್ನು ವಿಶ್ಲೇಷಣೆ ಮಾಡುವಾಗ ಕೆಲವು ವಿಚಾರಗಳಲ್ಲಿ ಸಮಾನವಾಗಿವೂ ವಿರುದ್ಧವಾಗಿವೂ ಅನಿಸುತ್ತದೆ. ಎರಡು ಭಿನ್ನ ಸಾಮಾಜಿಕ, ಧಾರ್ಮಿಕ ಪರಿಸರದಿಂದ ಬಂದ ಅಕ್ಕಮಹಾದೇವಿ ಮತ್ತು ಸಂಚಿಹೊನ್ನಮ್ಮನ ವಿಚಾರಗಳನ್ನು ಅಂತರ ಇಟ್ಟುಕೊಂಡು

ಆಧುನಿಕವಾಗಿ ವೈಚಾರಿಕನೆಲೆಯಲ್ಲಿ ಅನ್ವಯಿಕವಾಗಿ ತೌಲನಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಬದುಕಿಗೆ ಕೆಲವು ಅರ್ಥಪೂರ್ಣ ವಿಚಾರಗಳು ಸಿಗುತ್ತವೆ.

ಕೌಟುಂಬಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ರಚನೆ-ಸಂಸ್ಥೆಗಳೆಲ್ಲದರಲ್ಲು ಅಂತರ್ಗತವಾಗಿರುವ ಲಿಂಗತಾರತಮ್ಯ, ಹಿಂಸೆ ಅಸಮಾನತೆ ತುಂಬಿಕೊಂಡಿರುವುದು ವಾಸ್ತವ. ಲಿಂಗಾಧಾರಿತ ಹಿಂಸೆ ಅಸಮಾನತೆ ಇನ್ನೂ ಜೀವಂತವಾಗಿರಲು ಕಾರಣಗಳೇನು? ಕುಟುಂಬವ್ಯವಸ್ಥೆಯ ರಾಚನಿಕ ಲೋಪಗಳು ಲಿಂಗಾಧಾರಿತ ಅಸಮಾನತೆಯ ಹಿಂಸೆಗಳಾಗಿ ಜೀವಂತವಾಗಿಲು ಒಂದು ಪ್ರಮುಖ ಕಾರಣ. **'ಪೆಣ್ಣು ಪೆಣ್ಣೆಂದೇಕೆ ಬೀಳಗಳೆವರು'** ಎನ್ನುವ ಲಿಂಗ ಅಸಮಾನತೆಯ ಪ್ರಜ್ಞೆಯೇ ಇಲ್ಲದ ಕಾಲಘಟ್ಟದಲ್ಲಿ ನಿಂತು ಮಹಿಳಾಪರವಾದ ಹೊನ್ನಮ್ಮನ ಈ ಕೂಗು ಅಷ್ಟು ಸುಲಭದ ಮಾತಲ್ಲ. ತನ್ನ ಕೃತಿಯ ಉದ್ದಕ್ಕೂ ಪುರಾಣ ನಿದರ್ಶನಗಳನ್ನು ಉಲ್ಲೇಖಿಸಿ ತಾನು ಹೇಳಿದೆಲ್ಲವೂ ಅವಳ ಕಾಲಮಿತಿಯಲ್ಲಿ ಮಹಿಳಾಪರವಾದದ ಮಾತುಗಳೆ. ಅಬಲೆಯಾದ ಹೆಣ್ಣಿಗೆ ಕೌಟುಂಬಿಕ ಆಶ್ರಯ ಮೂಲಭೂತವಾಗಿತ್ತು. ವಿಚ್ಛೇದನಗಳಿಗೆ ಆಸ್ಪದವಿಲ್ಲದ ಹೆಣ್ಣು ವಿದ್ಯೆ ವಿವೇಕವಿಲ್ಲದ ಸ್ಥಿತಿಯಲ್ಲಿ ಗಂಡನನ್ನೇ ಅನಿವಾರ್ಯವಾಗಿ ನಂಬಿ ಬದುಕಬೇಕಾಗಿತ್ತು. ಅನ್ಯಧರ್ಮಗಳ ದಾಳಿಗಳ ಕಾರಣ, ಶೀಲವೆನ್ನುವ ಹೊರೆಯನ್ನು ಹೊತ್ತು ಕುಟುಂಬದಲ್ಲಿಯೇ ಬಂಧಿಯಾಗಬೇಕಾಗಿತ್ತು. ಅಂದು ಪರಂಪರೆಯಿಂದ ಬಂದ ಸಂಪ್ರದಾಯಗಳಲ್ಲಿ ಬಿಗಿಯಾದ ನಂಬಿಕೆ ನೆಲೆಯೂರಿತ್ತು. ಹೊನ್ನಮ್ಮ ಕಾಲಮಿತಿ ಮೀರಿ ಇತಿಹಾಸವನ್ನು ಸೃಷ್ಟಿಸಿದವಳಲ್ಲ. ಹೆಣ್ಣಿನ ಹಿತವನ್ನು ಬಯಸುವ ಪರಮೋದ್ದೇಶ ಅವಳದಾಗಿತ್ತು. ಇಬ್ಬರ ವಿಚಾರಗಳ ಕ್ರಮ, ವರ್ತನೆಯಲ್ಲಿ ವ್ಯತ್ಯಾಸವಿದ್ದರೂ, ಹೊನ್ನಮ್ಮನ ಈ ಸಂಪ್ರದಾಯನಿಷ್ಠ ವಿಚಾರಗಳು ಪುರುಷನಿಷ್ಠೆಗೆ ನಿರ್ಮಿಸಿಕೊಂಡ ಸಂತಿಗಳೆನ್ನುವುದು ಸ್ತ್ರೀವಾದದ ಸ್ಪಷ್ಟ ನಿಲುವು.

ಕುಟುಂಬ ವ್ಯವಸ್ಥೆಯಿಂದ ವಿಮೋಚನೆ ಪಡೆದು, ವೈಯಕ್ತಿಕ ಸ್ವತಂತ್ರದ ಆಧುನಿಕ ಬೀಜ ಬಿತ್ತಿದ ಅಕ್ಕನ ರೋಚಕ ಬದುಕು, ಹೆಣ್ಣಿನ ಕುಲಕ್ಕೆ ಒಂದು ಇತಿಹಾಸ. ಈ ಗಟ್ಟಿತನದ ರೋಚಕತೆಯಲ್ಲಿ ದೈಹಿಕ ಹಾಗೂ ಮಾನಸಿಕವಾದ ಹಿಂಸೆ, ಕ್ರೌರ್ಯ, ನೋವು, ಯಾತನೆ, ಅವಮಾನಗಳ ವಿರುದ್ಧದ ಹೋರಾಟವಿದೆ. ಮತ್ತು ಇವುಗಳಿಗೆ ತನ್ನ ಪ್ರತಿಭಟನೆಯೂ ಇದೆ. ಸಂಪ್ರದಾಯಿಕ ಸಂಬಂಧಗಳಿಂದ ಹೊರಬಂದು ಪರ್ಯಾಯ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ರೂಪಿಸಿಕೊಂಡ ಹೊಸತನವಿದೆ. ಇಲ್ಲಿ ಅಕ್ಕ ತನ್ನ ನಿಲುವುಗಳಿಗೆ ಅಚಲವಾಗಿ ಅಂಟಿಕೊಳ್ಳುವಿಕೆಯಿದೆ. ಹಾಗೆಯೇ, ತೀರಾ ಅಡ್ಡಿಯಾದಂತೆ ಅನಿವಾರ್ಯತೆಯೊಂದಿಗೆ ಅವುಗಳಿಂದ ವಿಮೋಚನೆ ಪಡೆಯುವ ಧೈರ್ಯ ಮತ್ತು ವಿವೇಚನೆಯ ಜ್ಞಾನವೂ ಇದೆ. ಹೆಣ್ಣಿನ ಅಸ್ಮಿತೆಯ ವಿಚಾರ ಬಂದಾಗ ಅಕ್ಕನ ವಿಮೋಚನೆಗಾಗಿ ತಳೆದ ಮಾನಸಿಕ ಹಾಗೂ ಆಕೆಯ ಹೋರಾಟದ ನಿಲುವುಗಳು ಸ್ಫೂರ್ತಿಯಾದರೂ, ಅಕ್ಕನ ಆರಿಸಿಕೊಂಡ ದಾರಿ ಮಾತ್ರ ತುಂಬಾ ಕಠಿಣ.

ಪತಿಯೇ ದೈವವೆನ್ನುವ ಹೊನ್ನಮ್ಮ ಕಾಯಾ ವಾಚಾ ಮನಸಾ ಗಂಡ-ಹೆಂಡತಿ ಸಹೃದಯರಾಗಿ ಪರಸ್ಪರ ಒಂದಾಗಬೇಕು. ಕಾಯಾ ವಾಚಾ ಮನಸಾ ಸರ್ವವನ್ನು ಲಿಂಗಕ್ಕೆ ಅರ್ಪಿಸಿ ರತಿ ಸುಖ ಪಡೆಯುವುದು ಅಕ್ಕನ ಧೋರಣೆ. ಇಬ್ಬರಲ್ಲೂ ದಾಂಪತ್ಯ ಸುಖದ ಹೊನಲಿದೆ. ತನ್ನೆಲ್ಲಾ ಸೌಂದರ್ಯವನ್ನು ಇಷ್ಟದೈವಕ್ಕೆ (ಪತಿಗೆ-ಶಿವನಿಗೆ) ಮೀಸಲಿಡುವ ಇಬ್ಬರ ಈ ನಿಲುವಿನಲ್ಲಿ ಪ್ರೇಮದ ಆರ್ಕಣೆಯಿದೆ, ಅರ್ಪಣೆಯಿದೆ. ಹೊನ್ನಮ್ಮನಲ್ಲಿನ ಲೌಕಿಕ ಪತಿಭಕ್ತಿಯ-ಪ್ರೇಮ, ಅಕ್ಕನ ಅಲೌಕಿಕ ದೈವಭಕ್ತಿಯ-ಪ್ರೇಮ ತಾತ್ವಕವಾಗಿ ದಾಂಪತ್ಯದ ಪ್ರೇಮವನ್ನು ಹೇಳುತ್ತವೆ. ಎಲ್ಲಾ ಕಾಲಕ್ಕೂ ದಾಂಪತ್ಯ ಪ್ರೇಮ ಹಾಗೂ ದಾಂಪತ್ಯದಲ್ಲಿ ಪ್ರೇಮವು ಹಾಸು ಹೊಕ್ಕಂತಿರಬೇಕೆಂದು ಬಯಸುವುದು ಸಹಜ.

ದಾಂಪತ್ಯದ ಎರಡು ಮನಸ್ಸುಗಳು ಪರಸ್ಪರ ಮಾಸದಂತೆ ಏಕೀಭನವಿಸುಕೆಯ ಅಬೇಧತೆ ಸುಖಮತೆಯ ದಾಂಪತ್ಯ. ಶೂನ್ಯದ ಬಿಂದುವಿನಿಂದ ಆರಂಭಿಸಿ ಪುನಃ ಅದೇ ಬಿಂದುವಿನಲ್ಲಿ ತಂದು ನಿಲ್ಲಿಸುವಂತೆ ಅಕ್ಕ ಮತ್ತು ಹೊನ್ನಮ್ಮನ ವಿಚಾರಗಳು ಅದ್ವೈತವೇ. ಸಮರ್ಪಣೆಯ ಭಾವದಲ್ಲೇ ದಾಂಪತ್ಯ ಸಾಗಬೇಕು. ಪರಸ್ಪರ ಅವಲಂಬನೆಯಿದ್ದರೆ ಸಾಕು ಆದರೆ, ಅದು ಇಬ್ಬರಿಗೂ ಹೊರೆಯಾಗಬಾರದು. ಹಾಗೆಯೇ, ಪರಸ್ಪರ ಸಮಾನತೆಯಡಿಯಲ್ಲಿ ಸ್ವಾತಂತ್ರ, ಸ್ವಾಭಿಮಾನ, ಗೌರವ ಉಳಿಸಿಕೊಂಡಾಗಷ್ಟೇ ದಾಂಪತ್ಯಕ್ಕೆ ನಿಜವಾದ ಅರ್ಥದಲ್ಲಿ ಪರಿಪೂರ್ಣತೆ ಸಿಗುವುದು.

**ಪರಾಮರ್ಶೆಯ ಗ್ರಂಥಗಳು**

1. ಡಾ. ವೀರಣ್ಣ ರಾಜೂರ (ಸಂ), ಶಿವಶರಣೆಯ
2. ಡಿ. ಚಂಪಾಬಾಯಿ(ಸಂ) ಹದಿಬದೆಯ ಧರ್ಮ
3. ಡಾ. ಸಾ. ಶಿ. ಮರುಳಯ್ಯ(ಸಂ), ಅಕ್ಕನ ವಚನಗಳು